

# ಯಂತ್ರಮಾನವನ ಎದೆಯಲ್ಲಿ ಭಾವುಕತೆಯ ಪಸೆ

**ಯಂತ್ರಗಳು ಮನುಷ್ಯರಂತೆಯೇ ವರ್ತಿಸಲು ತೊಡಗುತ್ತಿರುವ ಈ ಕಾಲದಲ್ಲಿ ಮನುಷ್ಯ ನಿರ್ಭಾವುಕ ಯಂತ್ರವಾಗುವ ಮತ್ತೊಂದು ವಿಪರ್ಯಾಸವೂ ಘಟಿಸುತ್ತಿದೆ. ಈ ದುರಂತವನ್ನು ಮೆಲುವಾಗಿ ಮುಖಾಮುಖಿಯಾಗಿಸುವ ಕಿರುಚಿತ್ರ 'ರಸ್ಟ್ ಇನ್ ಪೀಸ್'.**

■ ಗೌರಿ



**ಹೆಸರು:** ರಸ್ಟ್ ಇನ್ ಪೀಸ್
**ನಿರ್ದೇಶನ:** ವಿಲಿಯಮ್ ಸ್ಲಾಟರ್ ವೆಲ್ಸ್
**ನಿರ್ಮಾಣ:** ಇಲಾನ್ ಅಮೌಯಾಲ್, ಡೇವಿಡ್ ಝುರಾಟ್
**ಛಾಯಾಗ್ರಹಣ:** ಆರ್ಸನ್
**ತಾರಾಗಣ:** ರೈಸ್ ಕೊಪ್ರೊ, ಡೋಂಗ್

ರೋಬೊಗಳು ಮನುಷ್ಯನ ಬುದ್ಧಿಮತ್ತೆಗೆ ಸರಿಸಮವಾಗಿ ನಿಲ್ಲುವ ಕಾಲ ದೂರವೇನಿಲ್ಲ. ಯಂತ್ರದ ಎದೆಯೊಳಗೆ ಭಾವನೆಗಳನ್ನು, ತಲೆಯೊಳಗೆ ಬುದ್ಧಿಯನ್ನೂ ತುಂಬಿ ಅವುಗಳನ್ನು ಬಳಸುವ ವಿವೇಚನೆಯನ್ನೂ ಸೃಷ್ಟಿಸುವ ಪ್ರಯತ್ನಗಳು ಜಗತ್ತಿನಾದ್ಯಂತ ನಡೆದೇ ಇವೆ. ನಮ್ಮ ಸಿನಿಮಾ, ಸಾಹಿತ್ಯಕೃತಿಗಳಲ್ಲಂತೂ ಮನುಷ್ಯನನ್ನೂ ಮೀರಿಸುವ ರೋಬೊಗಳ ಕಥೆಗಳು ಬಂದುಹೋಗಿವೆ. ಮನುಷ್ಯನಿಂದಲೇ ಸೃಷ್ಟಿಗೊಂಡ ಯಂತ್ರಗಳಿಗೆ ಭಾವನೆಗಳು ಬಂದರೆ ಅವುಗಳ ಒಳಿತು ಕೆಡುಕುಗಳು ಏನಾಗಬಹುದು ಎಂಬುದನ್ನು ಹಲವು ಸಿನಿಮಾಗಳು ಊಹಿಸಿ ತೆರೆಯ ಮೇಲೆ ಕಾಣಿಸಿವೆ. 'ರಸ್ಟ್ ಇನ್ ಪೀಸ್' ಕೂಡ ರೋಬೊ ಮತ್ತು ಅದನ್ನು ಸೃಷ್ಟಿಸಿದ ಮನುಷ್ಯನ ನಡುವಿನ ಭಾವುಕ ಸಂಬಂಧವನ್ನು ಕೇಂದ್ರವಾಗಿಸಿಕೊಂಡು ರೂಪಿಸಲಾದ ಕಿರುಚಿತ್ರ.

ತ್ಯಾಜ್ಯಗಳ ರಾಶಿಯಿಂದ ಎದ್ದುನಿಲ್ಲುವ ಜರ್ಝರಿತ ರೋಬೊ ತನ್ನ ಮನೆಯನ್ನು ಹುಡುಕಿ ಹೊರಡುತ್ತದೆ. ಅದರ ಮೈ ತುಕ್ಕು ಹಿಡಿದಿದೆ. ನಡಿಗೆಯಲ್ಲಿ ದೃಢತೆ ಇಲ್ಲ. ಆದರೆ ತನ್ನ ಮನೆಗಾಗಿ ಹಂಬಲಿಸುತ್ತದೆ. ಬಯಲುದಾರಿಯನ್ನು ಹಾದು ತನ್ನ ಮನೆಗೆ ತಲುಪುತ್ತದೆ. ಆ ಮನೆಗೂ ಮುನ್ನ ಸಣ್ಣದೊಂದು ಶೆಡ್ ಹಾಯುವಾಗ ಕೊಂಚ ನಿಲ್ಲುತ್ತದೆ. ಅಲ್ಲಿ ಒಳಗೆ ಇಣುಕಿದರೆ ಪರದೆಯ ಹಿಂದೆ ನೇಣು ಹಾಕಿಕೊಂಡಿರುವಂಥ ಮನುಷ್ಯ ಆಕೃತಿಯ ನೆರಳು ಕಾಣಿಸುತ್ತದೆ. ಹಾಗೇ ಮುಂದುವರಿದು ತನ್ನ ಮನೆ ತಲುಪುತ್ತದೆ.

ಅಲ್ಲಿ ಅದನ್ನು ಸೃಷ್ಟಿಸಿದ ಮನುಷ್ಯನಿದ್ದಾನೆ. ಅವನ ಹೆಸರು ಡೆವಿನ್. ಅವನಿಗಾಗಿ ಬರ್ತ್‌ಡೇ ಆಚರಿಸುವ, ಅವನಿಗಾಗಿ ನೃತ್ಯ ಮಾಡುವ, ಬಯಲಲ್ಲಿ ಮಲಗಿ ಬೆಳದಿಂಗಳ ವೀಕ್ಷಿಸುವ ರೋಬೊಗೆ ಮಾಲೀಕನೆಂದರೆ ಅಕ್ಕರೆ. ಆದರೆ ಮಾಲೀಕನೋ ಸ್ವತಃ ಮನುಷ್ಯರೂಪದ ರೋಬೊ ಆಗಿದ್ದಾನೆ. ಈ ಭಾವುಕ ರೋಬೊ ಕೈಯಿಂದ ತಪ್ಪಿಸಿಕೊಳ್ಳಬೇಕು ಎನ್ನುವುದು ಅವನ ಹವಣಿಕೆ. ಈಗಾಗಲೇ ಅವನು ಮತ್ತೊಂದು ರೋಬೊ ತಯಾರಿಕೆಯಲ್ಲಿ ಮಗ್ನನಾಗಿದ್ದಾನೆ. ರೋಬೊ ಮನೆಗೆ ಬರುವಾಗ ಕಂಡ, ನೇಣು ಹಾಕಿಕೊಂಡ ಸ್ಥಿತಿಯಲ್ಲಿರುವ ಆಕೃತಿ ಹೊಸದಾಗಿ ಸೃಷ್ಟಿಗೊಳ್ಳುತ್ತಿರುವ ರೋಬೊ.

ಕೊನೆಗೆ ಈ ರೋಬೊ ಜೊತೆಗೆ ನರ್ತಿಸಿ, ಅದನ್ನು ಸಂತೈಸಿ ಮರುದಿನ ಬೆಳಿಗ್ಗೆ ಅದನ್ನು ಮತ್ತೆ ಅದೇ ತ್ಯಾಜ್ಯಗಳ ರಾಶಿಯ ಮೇಲೆ ಒಗೆದು ಇನ್ನಷ್ಟು ಧ್ವಂಸಗೊಳಿಸಿ ಬರುತ್ತಾನೆ. ಅವನು ಇತ್ತ ಹೋದಂತೆ ರೋಬೊ ಮೈಯಲ್ಲಿ ಮತ್ತೆ ಬೆಳಗಾಗುತ್ತದೆ.

ಮನುಷ್ಯ ಯಂತ್ರಗಳನ್ನು ಕಂಡುಹಿಡಿಯುತ್ತಾ ಹೋದ ಹಾಗೆ, ಯಂತ್ರಗಳು ಮನುಷ್ಯನಿಗೆ ಸರಿಸಮವಾಗುತ್ತ ಹೋದ ಹಾಗೆ, ಸ್ವತಃ ಮನುಷ್ಯನೇ ನಿರ್ಭಾವುಕ ಯಂತ್ರವಾಗುವ ವಿಪರ್ಯಾಸ ಈ ಕಿರುಚಿತ್ರದ ಕೇಂದ್ರ. ಆರ್ಸನ್ ಅವರ ಛಾಯಾಗ್ರಹಣ ಈ ಚಿತ್ರಕ್ಕೆ ಗಟ್ಟಿಯಾದ ಆವರಣವನ್ನು ಕಟ್ಟಿಕೊಟ್ಟಿದೆ. ಬಯಲದಾರಿಯಲ್ಲಿ ಸಾಗಿ ಪ್ರಪಾತವಿರುವ ಗುಡ್ಡದ ತುತ್ತ ತುದಿಯಲ್ಲಿ ನಿಂತ ರೋಬೊ 'ಕನೆಕ್ಟ್ ಕನೆಕ್ಟ್' ಎಂದು ಹೇಳುವ ದೃಶ್ಯವಂತೂ ಇಡೀ ಮನುಕುಲದ ಪ್ರಾರ್ಥನೆಯಂತೆ ಭಾಸವಾಗುತ್ತದೆ. ಆದರೆ ದೃಶ್ಯಪಟಗಳಲ್ಲಿ ಕಾಣಿಸುವ ಈ ವ್ಯಾಪಕತೆ ಕಥೆಯ ಆತ್ಮದಲ್ಲಿ ಇಲ್ಲ.

ಮನುಷ್ಯ ಸಂಬಂಧಗಳೇ ಸಡಿಲುಗೊಳ್ಳುತ್ತಿರುವ ಕಾಲದಲ್ಲಿ ನಿರ್ದೇಶಕರು ರೋಬೊ ಮೂಲಕ ಮನುಷ್ಯನಿಗೆ ಕಿತ್ತೊಗೆದಷ್ಟೂ ಬತ್ತದೆ ಬೆಳಗುವ ಸಂಬಂಧಗಳ ಜೀವಂತಿಕೆಯ ಕಥೆಯನ್ನು ಹೇಳಹೊರಟಿದ್ದಾರೆ. ತೆರೆಯ ಮೇಲೆ ಇದು ರೋಚಕವಾಗಿ ನೋಡಿಸಿಕೊಂಡು ಹೋಗುವುದಿಲ್ಲ. ರೋಬೊದ ಸಾವಧಾನದ ನಡಿಗೆಯಂತೆ ಸಾಗುವ ಚಿತ್ರ, ಆ ನಿಧಾನದಲ್ಲಿಯೇ ನಮ್ಮ ನಮ್ಮೊಳಗೆ ಬರಬಿದ್ದು ಬಿರುಕುಬಿಟ್ಟಿರುವ ಭಾವುಕತೆಯ ನೆಲದಲ್ಲಿ ಕೊಂಚ ಪಸೆ ಹುಟ್ಟಿಸುವಷ್ಟು ಸತ್ವವನ್ನು ಹೊಂದಿದೆ.

ಈ ಕಿರುಚಿತ್ರ ವೀಕ್ಷಣೆಗೆ **bit.ly/2kLOmxf** ಕೊಂಡಿ/ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.